ಪ್ರಾಸಾ-4 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕಃ 11.02.2026

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಜಿ.ಬಿ.ಆರ್. ವಕೀಲರಿಂದ

4. ಮಹಾದೇವಪ್ಪನಿಗೆ ನಾವು ಇಬ್ಬರೂ ಗಂಡು ಮಕ್ಕಳು ಇದ್ದು, ಒಬ್ಬ ಹೆಣ್ಣು ಮಗಳು ಇರುತ್ತಾಳೆ. ನಾವೆಲ್ಲ ಒಂದೇ ಕುಟುಂಬದಲ್ಲಿ ಒಂದೆ ಕಡೆ ಇರುತ್ತೇವೆ. ನಮ್ಮ ಕುಟುಂಬದ ಆಗುಹೋಗುಗಳನ್ನು ನಮ್ಮ ತಂದೆಯೇ ನೋಡಿಕೊಳ್ಳುತ್ತಾರೆ. ನಮ್ಮ ಅಣ್ಣ ಸಾಬಪ್ಪ ಪೊಲೀಸ ಕೆಲಸ ಮಾಡುತ್ತಾನೆ. ನಮ್ಮ ತಂದೆಗೆ ಐದು ಜನ ಅಣ್ಣತಮ್ಮಂದಿರು ಇರುತ್ತಾರೆ. ಸುಮಾರು 20 ವರ್ಷಗಳ ಹಿಂದೆ ನಮ್ಮ ತಂದೆಯವರು ಮತ್ತು ಅವರ ಸಹೋದರರು ಭಾಗ ಮಾಡಿಕೊಂಡಿರುತ್ತಾರೆ. ಭಾಗ ಆದ ಮೇಲೆ ಅವರವರ ಭಾಗಕ್ಕೆ ಬಂದಂತಹ ಆಸ್ತಿಯನ್ನು ಅವರೇ ಅನುಭವಿಸಿಕೊಂಡು ಬರುತ್ತಿದ್ದಾರೆ. ಮನೆಯಲ್ಲಿ ಸಹ ಐದು ಭಾಗ ಆಗಿರುತ್ತದೆ ಎಂದರೆ ಸರಿ. ಮಹಾಲಿಂಗಪ್ಪ ಮತ್ತು ಸಾಬಣ್ಣ ಇವರು ತಮ್ಮ ಮನೆಯಲ್ಲಿ ಇದ್ದಂತಹ ಭಾಗವನ್ನು ಚಂದ್ರಪ್ಪನಿಗೆ ಮಾರಾಟ ಮಾಡಿರುತ್ತಾರೆ ಎನ್ನುವುದಕ್ಕೆ ಸಾಕ್ಷಿದಾರರು ಮೂರು ಜನರು ಕೂಡಿ ಅಂದರೆ ಮಹಾದೇವಪ್ಪ, ಸಿದ್ರಾಮಪ್ಪ ಮತ್ತು ಚಂದ್ರಾಮಪ್ಪ ಈ ಮೂರು ಜನರು ಸೇರಿ ಮನೆ ಖರೀದಿಸಿರುತ್ತಾರೆ. ನಾವು ಮೂರು ಜನ ಖರೀದಿ ಮಾಡಿದ ಮೇಲೆ ಅವರವರ ಕಬ್ಜದಲ್ಲಿ ಇರುತ್ತಾರೆ. ಆ ಮನೆಯ ಚತ್ತನ್ನು ಚಂದ್ರಾಮಪ್ಪ ರೀಪೇರಿ ಮಾಡಿಸಿರುತ್ತಾರೆ ಎನ್ನುವುದಕ್ಕೆ ಸಾಕ್ಷಿದಾರರು ಮಹಾದೇವಪ್ಪ ಮತ್ತು ಚಂದ್ರಾಮಪ್ಪ ಇಬ್ಬರೂ ಸೇರಿಸಿ ರಿಪೇರಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಚಂದ್ರಾಮಪ್ಪ ಇವರು ಶಿಕ್ಷಕರು ಆಗಿದ್ದರು. ಚಂದ್ರಾಮಪ್ಪ ಶಿಕ್ಷಕರು ಆಗಿದ್ದು, ಅವರು ಒಬ್ಬರೆ ಮನೆಯನ್ನು ರಿಪೇರಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಪಾಲದ ಮೇಲೆ ಜಮೀನಿನಲ್ಲಿ ಅವರಿಗೆ ಬಂದಂತಹ ಆಸ್ತಿಯಲ್ಲಿ ಅವರೇ ಇರುತ್ತಾರೆ. ಮನೆಗೆ ಒಂದೆ ಮುಖ್ಯ ಬಾಗಿಲು ಇರುತ್ತದೆ. ಚಂದ್ರಾಮಪ್ಪನಿಗೆ ಬಂದಂತಹ ಜಮೀನನ್ನು ಮೊದಲು ನಾವೆ ಸಾಗುವಳಿ ಮಾಡುತ್ತಿದ್ದೇವು ಎಂದರೆ ಸರಿ. ಮೊದಲು ಸುಮಾರು 20-25 ವರ್ಷದವರೆಗೆ ನಾವೆ ಚಂದ್ರಾಮಪ್ಪನ ಜಮೀನು ಪಾಲು ಮಾಡುತ್ತಿದ್ದೇವು. ಈ ಕೇಸು ಆಗುವುದಕ್ಕಿಂತ ಪೂರ್ವದಲ್ಲಿ ಚಂದ್ರಪ್ಪನ ಜಮೀನು ನಾವು ಸಾಗುವಳಿ ಮಾಡುವುದರಿಂದ ಬಿಡಿಸಿರುತ್ತಾರೆ ಎಂದರೆ ಸರಿ. ಜಮೀನು ಬಿಡಿಸಿದಕ್ಕಾಗಿ

ನಮ್ಮ ಮತ್ತು ಚಂದ್ರಪ್ಪನ ನಡುವೆ ವೈಮನಸ್ಸು ಬಂದಿರುತ್ತದೆ ಎಂದರೆ ಸರಿಯಲ್ಲ. ಚಂದ್ರಪ್ಪ ಮಾಸ್ತರ ಇವರಿಗೆ ಸುಲೋಚನ ಇವರೊಂದಿಗೆ ಮದುವೆ ಆಗಿತ್ತು. ಸುಲೋಚನ ಇವರಿಗೆ ಒಬ್ಬ ಮಗಳು ಇದ್ದು, ಆಕೆಯು ಮೃತಪಟ್ಟಿರುತ್ತಾಳೆ. ಸುಲೋಚನ ಇವರಿಗೆ ಬಹಳ ವರ್ಷಗಳಿಂದ ಲಕ್ವ(ಪಾರ್ಸಿ) ಹೊಡೆದಿರುತ್ತದೆ ಎಂದರೆ ಸರಿ. ಚಂದ್ರಪ್ಪನ ಮಗಳು ಮೃತಪಟ್ಟಿದ್ದು ಮತ್ತು ಸುಲೋಚನ ಆರೋಗ್ಯ ಸರಿ ಇಲ್ಲದಿದ್ದರಿಂದ ದೇವಮ್ಮ ಇವರನ್ನು ಮದುವೆ ಆಗಿರುತ್ತಾನೆ ಎಂದರೆ ಸರಿಯಲ್ಲ. ದೇವಮ್ಮ ಎನ್ನುವರಿಗೆ ನಾಲ್ಕು ಮಕ್ಕಳು ಇರುತ್ತಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ದೇವಮ್ಮ ಎನ್ನುವವರು ಮನೆ ಕೆಲಸಕ್ಕೆ ಇಟ್ಟುಕೊಂಡಿದ್ದರು. ದೇವಮ್ಮ ಈಗ ಆ ಮನೆಯಲ್ಲಿ ಇರುವುದಿಲ್ಲ. ಆ ದೇವಮ್ಮ ಈಗ ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ.

5. ದಿಃ 05.06.2016 ರಂದು ಜಗಳ ಆದಂತಹ ದಿನ ಆ ಮನೆಯಲ್ಲಿ ಚಂದ್ರಪ್ಪ ಮಾಸ್ತರ, ಮಹಾದೇವಪ್ಪ ಇರುತ್ತಿದ್ದರು. ಮನೆಯಲ್ಲಿ ನಾನು, ನಮ್ಮ ತಮ್ಮ ಸಾಬಣ್ಣ, ನನ್ನ ತಾಯಿ, ನನ್ನ ತಂದೆ ಮತ್ತು ನನ್ನ ಹೆಂಡತಿ ಮಕ್ಕಳು ಆ ಮನೆಯಲ್ಲಿ ಇದ್ದೇವು. ಸಿದ್ರಾಮಪ್ಪ ಆಗಾಗ ಮಧ್ಯೆ ಸೇವನೆ ಮಾಡುತ್ತಾನೆ. ಆ ಪ್ರಕಾರ ನಾವು ಮತ್ತು ಸಿದ್ರಾಮಪ್ಪ ಜಗಳ ಮಾಡುತ್ತಿದ್ದೇವು ಎಂದರೆ ಸಾಕ್ಷಿದಾರರು ಮುಂದುವರೆದು ಸಿದ್ರಾಮಪ್ಪ ಜಗಳ ಮಾಡಲು ಬಂದಿರುವುದಿಲ್ಲ ನಂತರ ಬಂದಿರುತ್ತಾನೆ. ಆಗ ನೀವು ಯಾಕೆ ಜಗಳ ಆಡುತ್ತೀರಿ ಅಂತಾ ಚಂದ್ರಪ್ಪ ಮಾಸ್ತರ ಬಿಡಿಸಲು ಬಂದಿರುತ್ತಾನೆ ಎಂದರೆ ಸರಿಯಲ್ಲ. ಆಗ ತಮ್ಮ ಸಾಬಣ್ಣ ಒಣಕ್ಕೆ ತೆಗೆದುಕೊಂಡು ಚಂದ್ರಪ್ಪ ಮಾಸ್ತರನ ತಲೆಗೆ ಹೊಡೆದಿರತ್ತಾನೆ ಎಂದರೆ ಸರಿಯಲ್ಲ. ನಾವು ಮನಸ್ಸಿಗೆ ಬಂದ ಹಾಗೆ ಚಂದ್ರಪ್ಪ ಮಾಸ್ತರಿಗೆ ಒದ್ದಿರುತ್ತೇವೆ ಎಂದರೆ ಸರಿಯಲ್ಲ. ಆಗ ಚಂದ್ರಪ್ಪ ಮಾಸ್ತರ ಮನೆಯಲ್ಲಿ ಪ್ರಜ್ಞೆ ತಪ್ಪಿ ಬಿದ್ದಿರುತ್ತಾನೆ ಎಂದರೆ ಸರಿಯಲ್ಲ. ಉಳಿದ ಆಪಾದಿತರೆಲ್ಲರೂ ಚಂದ್ರಪ್ಪನಿಗೆ ಮಾಸ್ತರನಿಗೆ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆತನ ಸ್ಥಿತಿ ಚಿಂತಜನಕವಾಗಿದ್ದು ಆತನ ಗುರುಮಠಕಲ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಗುರುಮಠಕಲ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳು ಚಂದ್ರಪ್ಪನ ಸ್ಥಿತಿ ಚಿಂತಜನಕವಾಗಿರುತ್ತದೆ ಎಂದು ಪ್ರಾಥಮಿಕ ಚಿಕಿತ್ಸೆ ಕೊಟ್ಟ ಮೇಲೆ ಸ್ಥಿತಿ ಚಿಂತ ಜನಕವಾಗಿದ್ದು ಆ

ಕೇಸು ನಮ್ಮ ಮೇಲೆ ಬರುತ್ತದೆ ಎಂದು ನಾವೆ ಪೊಲೀಸ ಠಾಣೆ ಹೋಗಿರುತ್ತ್ೇವೆ ಎಂದರೆ ಸರಿಯಲ್ಲ. ಅಲ್ಲಿಗೆ ಪೊಲೀಸರು ಬಂದು ನಮ್ಮ ಮೇಲೆ ಗುರುಮಠಕಲ್ ಆಸ್ಪತ್ರೆಯ ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆಂಬುಲೆನ್ಸನಲ್ಲಿ ಕಲಬುರಗಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿಂದ ಚಂದ್ರಪ್ಪ ಮಾಸ್ತರನಿಗೆ ಯುನಿಟೆಡ ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು, ನಮ್ಮ ತಮ್ಮ ಹಾಗೂ ನಮ್ಮ ತಂದೆ ಪೊಲೀಸರ ಮೇಲೆ ಪ್ರಭಾವ ಬೀರಿದ್ದು ಆಗಾಗಿ ಚಂದ್ರಪ್ಪನ ಹೆಂಡತಿ ದೇವಮ್ಮ ಇವರ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದೇವಮ್ಮ ಇವರು ನಾನು, ನನ್ನ ತಮ್ಮ, ನಮ್ಮ ತಂದೆ ಒಣಕ್ಕೆ ಮತ್ತು ಬಡಿಗೆಯಿಂದ ಹೊಡೆದಿರುತ್ತಾರೆ ಎಂದು ಆಸ್ಪತ್ರೆಯಲ್ಲಿ ಫಿರ್ಯಾದಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾವೆ ಚಂದ್ರಪ್ಪ ಮಾಸ್ತರನಿಗೆ ಹೊಡೆದಿದ್ದರಿಂದ ದೇವಮ್ಮ ಕೊಟ್ಟಂತಹ ಮೂಲ ಫಿರ್ಯಾದಿಯಲ್ಲಿ ದೇವಮ್ಮಳ ಸಹಿ ತೆಗೆದುಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ನಾವು ಹೊಡೆದಿರುತ್ತೇವೆ ಎಂದು ದೇವಮ್ಮ ಇವರು ನಮ್ಮ ಮೇಲೆ ದೂರು ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ತಮ್ಮ ಪೊಲೀಸ ಆಗಿದ್ದು ದೇವಮ್ಮ ಕೊಟ್ಟಂತಹ ಮೂಲ ಫಿರ್ಯಾದಿಯನ್ನು ಮುಚ್ಚಿಟ್ಟು, ದೇವಮ್ಮ ಇವರ ನಕಲು ಸಹಿ ಮಾಡಿ ಆ ಚಂದ್ರಪ್ಪನಿಗೆ ಅಪಘಾತ ಆದಂತಹ ಗಾಯಗಳು ಎಂದು ಫಿರ್ಯಾದಿಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಯುನಿಟೆಡ ಆಸ್ಪತ್ರೆಯಲ್ಲಿ ನನ್ನ ತಮ್ಮ ಚಂದ್ರಪ್ಪ ಇವರು ಮೇಲಿಂದ ಬಿದ್ದಿದಕ್ಕಾಗಿ ಗಾಯಗಳು ಆಗಿರುತ್ತಾವೆ ಎಂದು ಬರೆಯಿಸಿರುತ್ತಾನೆ ಎಂದರೆ ಸರಿಯಲ್ಲ. ದಿಃ 07.06.2016 ರಂದು ಚಂದ್ರಪ್ಪ ಮಾಸ್ತರ ಮೃತಪಟ್ಟಿರುತ್ತಾನೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ನಾವು ಹೊಡೆದಿರುವುದಿಲ್ಲ ಆತ ಮೃತಪಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮೇಲೆ ಕೊಲೆ ಕೇಸು ಬರುತ್ತದೆ ಎಂದು ಚಂದ್ರಪ್ಪ ಮಾಸ್ತರನಿಗೆ ಸಹಾಯ ಮಾಡಿದ ಎಲ್ಲರ ಮೇಲೆ ಈ ಕೇಸನ್ನು ಮಾಡಿರುತ್ತ್ೇವೆ ಎಂದರೆ ಸರಿಯಲ್ಲ. ನಮ್ಮ ಮೇಲೆ ಕೊಲೆ ಆಪಾದನೆ ಬರಬೇಕಾಗಿದ್ದು ಆದರೆ ನಾವು ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಈ ಕೇಸನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ.

6. ದಿಃ 05.06.2016 ರಂದು ನಾನು, ನಮ್ಮ ತಂದೆ ಮತ್ತು ನನ್ನ ತಮ್ಮ ಪೊಲೀಸ ಠಾಣೆಗೆ ಹೋಗಿದ್ದೇವು. ಚಂದ್ರಪ್ಪ ಮಾಸ್ತರ ಮನೆ ಬಿಟ್ಟು ಹೋಗಿ ಎಂದು ಹೇಳಿದ್ದರಿಂದ ನಾವು ಪೊಲೀಸ ಠಾಣೆಗೆ ಹೋಗಿರುತ್ತೇವೆ. ಈ ವಿಷಯವನ್ನು ಸುಳ್ಳಾಗಿ ದೂರಿನಲ್ಲಿ ಹೇಳಿರುತ್ತ್ತೇವೆ ಎಂದರೆ ಸರಿಯಲ್ಲ. ನಾವು ಪೊಲೀಸ ಠಾಣೆಗೆ ಹೋದಾಗ ಸಾಯಂಕಾಲ 7.00 ಗಂಟೆ ಆಗಿತ್ತು. ಪಿ.ಎಸ್.ಐ ಮತ್ತು ಅಲ್ಲಿ ಬಹಳಷ್ಟು ಜನರು ಇದ್ದರು. ಪೊಲೀಸ ಠಾಣೆಯಲ್ಲಿ ಸುಮಾರು 3 ಗಂಟೆ ಇದ್ದೇವು. ಆ ಪೊಲೀಸ ಠಾಣೆಯಲ್ಲಿ ನಾವು ಹೇಳಿದ ಪ್ರಕಾರ ಒಬ್ಬ ಪೊಲೀಸನನ್ನು ಚಂದ್ರಪ್ಪ ಮಾಸ್ತರನ ಸ್ಥಿತಿಯನ್ನು ತಿಳಿದುಕೊಂಡು ಬರಲು ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ಆ ಚಂದ್ರಪ್ಪ ಮಾಸ್ತರ ಬದಕುವುಳಿವ ಸಾಧ್ಯತೆ ಇರುವುದಿಲ್ಲವೆಂದು ಆ ಪೊಲೀಸ ನಮಗೆ ಠಾಣೆಗೆ ಬಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಬದುಕು ಉಳಿಯವ ಸಾಧ್ಯತೆ ಇರುವುದಿಲ್ಲವೆಂದು ನಾವು ಅವರ ಮೇಲೆ ಈ ಕೇಸನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ 2 ರಿಂದ 7 ಇವರು ಚಂದ್ರಪ್ಪನ ಮಾಸ್ತರನ ಸ್ಥಿತಿ ಚಿಂತ ಜನಕವಾಗಿದ್ದರಿಂದ ಆತನನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಪ್ರಕಾರ ಚಂದ್ರಪ್ಪ ಮಾಸ್ತರ ಮೃತಪಟ್ಟಿರುತ್ತಾನೆ ಅದೇ ಚಿಂತೆಯಲ್ಲಿ 3 ನೇ ಆರೋಪಿ ಮಾಣಿಕಪ್ಪ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಪೊಲೀಸರ ಮೇಲೆ ಪ್ರಭಾವ ಬೀರಿ ನಾವು ಎಲ್ಲ 2 ರಿಂದ 7 ಇವರ ಆರೋಪಿತರ ಮೇಲೆ ಕೇಸು ಮಾಡಿಸಿರುತ್ತ್ತೇವೆ ಎಂದರೆ ಸರಿಯಲ್ಲ. ಆ ಡಿಕ್ಕಿ ಮಾಡಿದ ಮೇಲೆ ಮೋಟಾರ ಸೈಕಲ ಹಿಂಬದಿ ಡಿಕ್ಕಿ ಮಾಡಿರುತ್ತಾರೆ. ಮೋಟಾರ ಸೈಕಲನ ಹಿಂದಿನ ಇಂಡಿಕೇಟರ ಜಕ್ಕಮ ಆಗಿರುತ್ತದೆ. ಆ ಮೋಟರ ಸೈಕಲನ ಹಿಂಬದಿ ಜಕ್ಕಂ ಆಗಿರುತ್ತದೆ. ಜೀಪು ಡಿಕ್ಕಿ ಮಾಡಿದ ಮೇಲೆ ನಾವು ಕೆಳಗಡೆ ಬಿದ್ದಿರುತ್ತ್ತೇವೆ ನಮಗೆ ಪ್ರಜ್ಞೆ ತಪ್ಪಿರುತ್ತದೆ. ಜೀಪು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವೆ ದ್ವಿಚಕ್ರ ವಾಹನಕ್ಕೆ ಜಕ್ಕಂ ಮಾಡಿಕೊಂಡು ಜೀಪು ಡಿಕ್ಕಿ ಮಾಡಿರುತ್ತದೆ ಎಂದು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರು ಹಾಗೂ ವೈದ್ಯಾಧಿಕಾರಿಗಳ ಮೇಲೆ ಪ್ರಭಾವ ಬೀರಿ ಗಾಯದ ಪ್ರಮಾಣದ ಪತ್ರಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

7. ನಮ್ಮ ತಂದೆ ಮಹಾದೇವಪ್ಪ ಇವರು ಜಮೀನು ವಿಷಯಕ್ಕೆ ಸಂಬಂಧಿದಂತೆ ದೇವಮ್ಮಳ ಮೇಲೆ ಕೇಸು ಹಾಕಿರುತ್ತಾರೆ ಎಂದರೆ ಸರಿ. O.S

No.193/2022 ಹಿರಿಯ ಸಿವಿಲ ನ್ಯಾಯಾಲಯದಲ್ಲಿ ನಮ್ಮ ತಂದೆ ಕೇಸು ಹಾಕಿರುತ್ತಾರೆ ಎಂದರೆ ಸಾಕ್ಷಿದಾರರು ಅದು ನನಗೆ ಗೊತ್ತಿರುವುದಿಲ್ಲ, ನನ್ನ ತಂದೆಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಆ ದಾವೆ ತಪ್ಪಿತಕ್ಕಾಗಿ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಅದೇ ನ್ಯಾಯಾಲಯಲ್ಲಿ O.S No.89/2024 ನ್ನು ದೇವಮ್ಮಳ ಮೇಲೆ ಹಾಕಿರುತ್ತಾರೆ ಎನ್ನುವುದಕ್ಕೆ ಸಾಕ್ಷಿದಾರರು ಅದು ನಮ್ಮ ತಂದೆಗೆ ಗೊತ್ತು ಎಂದು ನುಡಿಯುತ್ತಾರೆ. O.S.No.89/2024 ತೀರ್ಪು ಆಗದಿದ್ದರು ಸಹ ನನ್ನ ತಮ್ಮ O.S.No.101/2025 ನ್ನು ದೇವಮ್ಮ ಮತ್ತು ಇತರ 29 ಜನರ ಮೇಲೆ ಮಾಡಿರುತ್ತಾನೆ ಎಂದರೆ ಸಾಕ್ಷಿದಾರರು ಹಾಕಿರುಬಹುದು ಅದು ನಮ್ಮ ತಂದೆ ಮತ್ತು ನನ್ನ ತಮ್ಮನಿಗೆ ಗೊತ್ತು, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. O.S No.101/2025 ರಲ್ಲಿ ನಾನು ಒಂಬತ್ತನೇ ಪ್ರತಿವಾದಿ ಆಗಿದ್ದು ಅದರಲ್ಲಿ ನನಗೆ ನ್ಯಾಯಾಲಯದ ಸಮನ್ಸ ಮುಟ್ಟಿರುತ್ತದೆ ಸಾಕ್ಷಿದಾರರು ಮುಂದುವರೆದು ನಾನು ಹೊಲಕ್ಕೆ ಮನೆಗೆ ಹೋಗಿ ಬರುವುದು ಮಾಡುತ್ತೇನೆ ಅದು ನನ್ನ ತಮ್ಮನಿಗೆ ಗೊತ್ತು ಎಂದು ನುಡಿಯುತ್ತಾರೆ. O.S No.101/2025 ರಲ್ಲಿ ನ್ಯಾಯಾಲಯದ ಮುಂದೆ ಇರುವ ಆಪಾದಿತರು ಈಗೆ ಒಟ್ಟು 29 ಜನರ ಮೇಲೆ ದಾವೆ ಹಾಕಿರುತ್ತಾನೆ ಎಂದರೆ ಸಾಕ್ಷಿದಾರರು ಹಾಕಿರಬಹುದು ಅದು ನನ್ನ ತಮ್ಮನಿಗೆ ಗೊತ್ತು ಎಂದು ನುಡಿಯುತ್ತಾರೆ. ದೇವಮ್ಮ ಇವರಿಗೆ ಸತಾಯಿಸಬೇಕೆಂಬ ಉದ್ದೇಶದಿಂದ ನಾನು ಮತ್ತು ನನ್ನ ತಮ್ಮ O.S.No.193/2022, 89/2024, 101/2025 ಮಾಡಿರುತ್ತ್ೇವೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಹೊಲಕ್ಕೆ ಬಂದಿದ್ದರಿಂದ ಕೇಸು ಮಾಡಿರುತ್ತ್ೇವೆ ಎಂದು ನುಡಿಯುತ್ತಾರೆ. ನನ್ನ ತಮ್ಮ Crime No.234/2017, ಈ ಕೇಸು CC ಆಗಿ CC No.136/2018 ಆಗಿರುತ್ತದೆ ಇದೇ ಆಪಾದಿತರ ಮೇಲೆ ಹಾಕಿರುತ್ತಾನೆ ಎನ್ನುವುದಕ್ಕೆ ಸಾಕ್ಷಿದಾರರು ಅದು ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದೇವಮ್ಮ ಮತ್ತು ಆಕೆಯ ಮಕ್ಕಳು ಸೇರಿ ಅಕ್ಷಯ ಮತ್ತು ಸಾಬಣ್ಣ ಇವರ ಮೇಲೆ O.S.No.17/2017 ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತಿಲ್ಲ ಎಂದು ನುಡಿಯುತ್ತಾರೆ. O.S.No.17/2017 ದೇವಮ್ಮ ಮತ್ತು ಅಕ್ಷರ ಮತ್ತು ಸಾಬಣ್ಣ ಇವರು ರಾಜಿ ಮಾಡಿಕೊಂಡಿರುತ್ತಾರೆ. (ಕಾಂಪ್ರಮೈಜ ಮಾಡಿಕೊಂಡಿರುತ್ತಾರೆ) ಇರಬಹುದು ನನಗೆ ಗೊತ್ತಿರುವುದಿಲ್ಲ, ನನ್ನ ತಮ್ಮನಿಗೆ

ಗೊತ್ತು ಎಂದು ನುಡಿಯುತ್ತಾರೆ. ದೇವಮ್ಮಳ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಈ ಎಲ್ಲ ಕೇಸುಗಳನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ದೇವಮ್ಮ ಇವರು ಚಂದ್ರಪ್ಪನ ಹೆಂಡತಿ ಆಗಿರುವುದಿಲ್ಲ ಎಂದು ಈ ಎಲ್ಲ ಕೇಸುಗಳನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಮ್ಮ ಸಾಬಣ್ಣ ಈತನಿಗೆ ಮದುವೆ ಆಗಿರುವುದಿಲ್ಲ. ನನ್ನ ತಮ್ಮ ಗುರುಮಠಕಲ್ ನ ಜಯಶ್ರೀ ಎನ್ನುವ ಮಹಿಳೆಯೊಂದಿಗೆ ಮದುವೆ ಆಗಿದ್ದು, ಅವರ ವೈವಾಹಿಕ ಜೀವನದಿಂದಾಗಿ ಮಕ್ಕಳು ಆಗಿರುತ್ತಾವೆ ಎಂದರೆ ಸರಿಯಲ್ಲ. ನನ್ನ ತಮ್ಮ ಊರಿನಲ್ಲಿ ಮತ್ತು ಗುರುಮಠಕಲನಲ್ಲಿ ಬಡಜನರಿಗೆ ಸತಾಯಿಸಿ ಹಣ ವಸೂಲಿ ಮಾಡುತ್ತಿದ್ದನ್ನು ಎಂದರೆ ಸರಿಯಲ್ಲ. ಈಗ ನನ್ನ ತಮ್ಮ ಸಾಬಣ್ಣ ನನ್ನ ಮನೆಯಲ್ಲಿ ಇದ್ದು, ಇಂದು ನ್ಯಾಯಾಲಯಕ್ಕೆ ನಾವಿಬ್ಬರೂ ಒಟ್ಟಿಗೆ ಬಂದಿರುತ್ತೇವೆ. ನಾನು ನಮ್ಮ ತಂದೆ, ನನ್ನ ತಮ್ಮನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವೆಲ್ಲರೂ ಸೇರಿ ದೇವಮ್ಮ ಹೆಂಡತಿ ಚಂದ್ರಪ್ಪ ಹೆಂಡತಿ ಆಗಿರುವುದಿಲ್ಲವೆಂದು ಚಂದ್ರಪ್ಪ ನನ್ನನ್ನು ಧತ್ತಕ್ಕೆ ತೆಗೆದುಕೊಂಡಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೇವಮ್ಮ ಇವರಿಗೆ ಚಿಕ್ಕ ಚಿಕ್ಕ ಮಕ್ಕಳು ಇದ್ದು ಅವರನ್ನು ಸತಾಯಿಸಿ ಹೊರಗೆ ಹಾಕಿದರೆ ಆಕೆಯ ಆಸ್ತಿಯನ್ನು ನಾವು ಪಡೆಯಬಹುದೆಂದು ಕೇಸುಗಳನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.